2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 35/2019

| | | |
|---|---|---|
| ಸಾಕ್ಷಿದಾರರ ಹೆಸರು | - ಮೌನೇಶ್ ಅಲಿಯಾಸ್ ಮೋಹನ್ | ಪಿಡಬ್ಲೂ -18 |
| ತಂದೆಯ ಹೆಸರು | - ಚೆನ್ನಬಸಪ್ಪ | ಸಿಡಬ್ಲೂ -22 |
| ವಯಸ್ಸು | - 36 ವರ್ಷ | |
| ಉದ್ಯೋಗ | - ವಾಟರ್ ಮೆನ್ | |
| ವಾಸ ಸ್ಥಳ | - ಬಗ್ಗವಳ್ಳಿ, ತರೀಕೆರೆ ತಾಲ್ಲೂಕು | |

ದಿನಾಂಕಃ 19.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ನನಗೆ ಗೊತ್ತಿಲ್ಲ ನಾನು ಅವರನ್ನು ಈ ಹಿಂದೆ ನೋಡಿಲ್ಲ. ಮೃತ ರುದ್ರಸ್ವಾಮಿ ಗೊತ್ತಿಲ್ಲ. ಸಹ ಪಂಚರಾದ ಪ್ರಾಸಾ.17 ರವರು ಗೊತ್ತು, ಅವರು ನಮ್ಮ ಪಕ್ಕದ ಮನೆಯವರು.

2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕ 11.11.2018 ರಂದು ಸಾಕ್ಷಿಯ ಸಮಕ್ಷಮ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಅಮಾನತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.25 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.25(ಬಿ) ಎಂದು ಗುರುತಿಸಲಾಯಿತು.

3. ಸದರಿ ಸಹಿಯನ್ನು ಅಜ್ಜಂಪುರ ಪೊಲೀಸರು ಹೇಳಿದ ಮೇರೆಗೆ ಮಾಡಿದ್ದೇನೆ, ಆದರೆ ಎಲ್ಲಿ ಮತ್ತು ಯಾವ ವಿಚಾರಕ್ಕೆಂದು ನನಗೆ

ನೆನಪಾಗುತ್ತಿಲ್ಲ. ನಾನು ಸಹಿ ಮಾಡಿರುವ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಮತ್ತು ಅದನ್ನು ಪೊಲೀಸರು ನನಗೆ ಓದಿ ಹೇಳಿಲ್ಲ. ನನ್ನನ್ನು ಹೊರತುಪಡಿಸಿ ಸದರಿ ದಾಖಲೆಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ.

4. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಅಜ್ಜಂಪುರ ಪೊಲೀಸ್ ಠಾಣೆಗೆ ಸಹಿ ಮಾಡಲು ಹೋಗಿದ್ದಾಗ ಪೊಲೀಸರು ತೆಗೆದುಕೊಂಡಿದ್ದಾರೆ. ಸದರಿ ಫೋಟೋವನ್ನು ಈಗಾಗಲೇ ನಿಪಿ.26 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋವನ್ನು ಪೊಲೀಸರು ಯಾವ ಕಾರಣಕ್ಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋದಲ್ಲಿ ನನ್ನೊಂದಿಗೆ ಫ್ರಾಸಾ.17 ರವರ ಇರುವಿಕೆ ಕಂಡು ಬರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

5. ದಿನಾಂಕ 11.11.2018 ರಂದು ಅಜ್ಜಂಪುರ ಪೊಲೀಸರು ನಿಮ್ಮನ್ನು ಮತ್ತು ಫ್ರಾಸಾ.17 ರವರನ್ನು ತರೀಕೆರೆ ಗ್ರಾಮಾಂತರ

ವೃತ್ತ ನಿರೀಕ್ಷಕರ ಕಛೇರಿಗೆ ಮಹಜರ್ ಸಲುವಾಗಿ ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಮೃತ ರುದ್ರಸ್ವಾಮಿಯ ಮರಣೋತ್ತರ ಪರೀಕ್ಷೆಯನ್ನು ಮಾಡಿದ ಬಳಿಕ ಶವದ ಬೆಂಗಾವಲಿಗೆ ನೇಮಿಸಿದ್ದ ಚಾಸಾ.41 ರವರು ವೈದ್ಯಾಧಿಕಾರಿಗಳು ಸಂಗ್ರಹಿಸಿಕೊಟ್ಟಿದ್ದ ಒಂದು ಗೋಣಿಚೀಲ, ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲ, ಸುಮಾರು 3 ಅಡಿ ಉದ್ದವಿದ್ದ ಬಿಳಿ ಬಣ್ಣದ ಮೇನ್ಸ್ ವೈಯರ್ ಮತ್ತು ಕಪ್ಪು ಬಣ್ಣದ ಕೆಂಪು ಸೋಲ್ ಇರುವ ಒಂದು ಜೊತೆ ಬೆಲ್ಟ್ ಚಪ್ಪಲಿಯನ್ನು ನನ್ನ ಮತ್ತು ಫ್ರಾಸಾ.17 ರವರ ಸಮಕ್ಷಮ ತನಿಖಾಧಿಕಾರಿಗಳಿಗೆ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಪೊಲೀಸರು ನಮ್ಮ ಸಮಕ್ಷಮ ಸಂಜೆ 4.00 ರಿಂದ 4.45 ಗಂಟೆಯವರೆಗೆ ನಿಪಿ.25 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಪೊಲೀಸರು ನಿಪಿ.26 ರಂತೆ ಫೋಟೋವನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

6. ನಿಪಿ.25 ಪಂಚನಾಮೆ ಮತ್ತು ನಿಪಿ.26 ಫೋಟೋದ ಬಗ್ಗೆ ತಿಳಿದುಕೊಂಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಶ್ರೀ ಪಿ ಇ ಎಸ್ ವಕೀಲರಿಂದ ಆರೋಪಿತರ ಪರವಾಗಿಃ

7. ಪೊಲೀಸರು ನನ್ನ ಅನುಮತಿಯನ್ನು ಪಡೆದು ನಿಪಿ.26 ಫೋಟೋವನ್ನು ತೆಗೆದಿಲ್ಲ. ಹಾಗಾಗಿ ಸದರಿ ಫೋಟೋ ನೈಜವೇ ಅಲ್ಲವೇ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ